## 1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನಾ.ದ. ಭದ್ರಾವತಿ

## ಸಿ.ಸಿ ನಂಃ 3288/2023

ಚಾ.ಸಾಃ 2 ಪ್ರಾ.ಸಾಃ 2

| | | |
|---|---|---|
| ಹೆಸರು | : | ನಾಗರಾಜ |
| ತಂದೆಯ ಹೆಸರು | : | ಹಳದಪ್ಪ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಫಿಲ್ಡ್ ವರ್ಕ್ |
| ವಾಸಸ್ಥಳ | : | ದಾಸರಕಲ್ಲಹಳ್ಳಿ |

**ದಿನಾಂಕಃ 17.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ**

ನನಗೆ ಚಾ.ಸಾ–1, 3 ರಿಂದ 8 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ.

ದಿನಾಂಕಃ 28.02.2022 ರಂದು ಆರೋಪಿತನು ನನಗೆ ಕರೆ ಮಾಡಿ ನನ್ನ ಮನೆಯ ಮುಂದೆ ಒಂದು ಮರ ಬೀಳುವ ಸಾಧ್ಯತೆ ಇದೆ ನಿಮ್ಮ ಸಂಘಟನೆಗೆ ಬಂದು ಮರವನ್ನು ಕಟಾವು ಮಾಡಲು ಅರ್ಜಿ ಕೊಡುವುದಾಗಿ ತಿಳಿಸಿರುತ್ತಾರೆ. ಅವರಿಗೆ ಸಂಜೆ 6.00 ಗಂಟೆಗೆ ಬರಲು ನಾನು ತಿಳಿಸಿರುತ್ತೇನೆ. ಆರೋಪಿತನು ರಾತ್ರಿ 9.00 ಗಂಟೆಗೆ ಬಂದು ಅಧ್ಯಕ್ಷರನ್ನು ಕರೆಯಲು ನನಗೆ ಹೇಳಿದ್ದು, ನಾನು ಚಾ.ಸಾ–1 ಮತ್ತು 3 ರವರನ್ನು ಕರೆಸಿರುತ್ತೇನೆ. ಚಾ.ಸಾ–1 ಮತ್ತು ಆರೋಪಿತನಿಗೆ ವಾಗ್ವಾದ ಆಗಿರುತ್ತದೆ. ಆರೋಪಿತನು ಚಾ.ಸಾ–1 ರವರಿಗೆ ರಾಡಿನಿಂದ ಹೊಡೆದು ಕಪಾಳಕ್ಕೆ ಕೈಯಿಂದ ಹೊಡೆದಿರುತ್ತಾನೆ. ಆರೋಪಿತನು ಚಾ.ಸಾ–1 ರವರಿಗೆ ಕೆಟ್ಟ ಶಬ್ದಗಳಿಂದ ಬೈದು ನಿನ್ನನ್ನು ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ. ಆರೋಪಿತನು ಚಾ.ಸಾ–1 ರವರಿಗೆ ಸೂಳೆ

ಮಗನೇ ಎಂದು ಬೈದಿರುತ್ತಾನೆ. ನಾನು ಡಾ. ಬಿ ಆರ್ ಅಂಬೇಡ್ಕರ್ ಯುವಕರ ಸಂಘದಲ್ಲಿ ಸದಸ್ಯನಾಗಿದ್ದೆ. ನಾನು ಪೋಲೀಸರಿಗೆ ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

ಸಾಕ್ಷಿ ಎಂ.ಒ–1 ನ್ನು ನೋಡಿ ಗುರುತಿಸಿರುತ್ತಾರೆ.

**(ಈ ಸಂದರ್ಭದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ಆರೋಪಿತನು ಆತನ ಬೈಕಿನಲ್ಲಿದ್ದ ಕಬ್ಬಿಣದ ರಾಡಿನಿಂದ ಚಾ.ಸಾ–1 ರವರಿಗೆ ಹೊಡೆಯಲು ಬಂದಾಗ ಅವರು ತಪ್ಪಿಸಿಕೊಂಡಿರುತ್ತಾರೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸಾಕ್ಷಿ ನಾನು ಠಾಣೆಗೆ ಹೋಗಿ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ನಾನು ಆ ರೀತಿ ಹೇಳಿಕೆ ನೀಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ  ಎನ್ ಆರ್ ವಕೀಲರಿಂದ:**

ಡಾ. ಬಿ ಆರ್ ಅಂಬೇಡ್ಕರ್ ಯುವಕರ ಸಂಘ ಯಾವಾಗ ಸ್ಥಾಪನೆಯಾಗಿದೆ ಎಂದು ನನಗೆ ನೆನಪಿಲ್ಲ. ಯಾವುದೇ ಒಂದು ಕಾಮಗಾರಿಯನ್ನು ಮಾಡಬೇಕಾದರೆ ಅರ್ಜಿಯ ಮೇರೆಗೆ ಪಂಚಾಯ್ತಿಯವರೇ ಮಾಡಬೇಕು ಎಂದರೆ ಸರಿ. ಕಾಮಗಾರಿ ಮಾಡಲು ನಮ್ಮ ಸಂಘಟನೆಗೆ ಪಂಚಾಯ್ತಿಯವರು ಅರ್ಜಿ ಕೊಟ್ಟಿಲ್ಲ ಎಂದರೆ ಸರಿ. ಗ್ರಾಮಸ್ಥರು ನಮ್ಮ ಸಂಘಟನೆಗೆ ಸಮಸ್ಯೆ ಬಗ್ಗೆ ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ 3–4 ಅರ್ಜಿ ನೀಡಿರುತ್ತಾರೆ ಅವರ ಹೆಸರು ಶಿವಮೂರ್ತಿ ಮತ್ತು ಉಳಿದವರ ಹೆಸರು ನೆನಪಿಲ್ಲ ಎಂದು ನುಡಿಯತ್ತಾರೆ. ಅರ್ಜಿಯ ಪ್ರತಿಯನ್ನು ಪೋಲೀಸರಿಗೆ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ನಮ್ಮ ಸಂಘಟನೆಯಲ್ಲಿ ಸದಸ್ಯನಾಗಿದ್ದೆ. ಚಾ.ಸಾ–1 ರವರು ದನಗಳ ಮುಪತ್ತಿನ ಜಾಗದಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನು ಗ್ರಾಮ

ಪಂಚಾಯ್ತಿಯ ಸದಸ್ಯ ಎಂದರೆ ಸರಿ. ಆರೋಪಿತನು ಚಾ.ಸಾ–1 ರವರು ದನಗಳ ಮುಪತ್ತಿನ ಜಾಗದಲ್ಲಿ ಮನೆ ಕಟ್ಟಿದ ಬಗ್ಗೆ ನೋಟೀಸನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ದ್ವೇಶದಿಂದ ಚಾ.ಸಾ–1 ಮತ್ತು ನಾನು ಆರೋಪಿತರ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಕಾಮಗಾರಿ ಕೆಲಸ ನೀಡಿಲ್ಲ ಎಂದು ದ್ವೇಷದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಆರೋಪಿತನು ಚಾ.ಸಾ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾ.ಸಾ–1 ಮತ್ತು ನಾನು ಒಂದೇ ಸಂಘಟನೆಯವರಾಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಆರೋಪಿತನಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ–1 ಯಾರು ಪೋಲೀಸರಿಗೆ ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣಕ್ಕೂ, ಆರೋಪಿತರಿಗೂ ಮತ್ತು ಎಂ.ಒ–1 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಚಾ.ಸಾ–1 ರವರಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ.)
(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ನಾಸಿರಬಾನು)

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಭದ್ರಾವತಿ.